ಎಂ ವಿ ಸಿ. ನಂ. 289/2022 ಪಿಡಬ್ಲೂಃ 1

ದಿನಾಂಕಃ 18-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 2 ನೇ ಎದುರುದಾರರ ಪರವಾಗಿಃ ಶ್ರೀ ವಾಯ್ ವಿ ಎಸ್ ವಕೀಲರಿಂದಃ**

6. ಮಿರ್ಜಾನದಿಂದ ಕುಮಟಾ ಸುಮಾರು 10 ಕಿಲೋ ಮೀಟರ್ ಎಂದರೆ ಸರಿ . ಅಪಘಾತವಾದ ಕೂಡಲೇ ಕುಮಟಾ ಆಸ್ಪತ್ರೆಗೆ ಹೋಗಲು ತೊಂದರೆ ಇರಲಿಲ್ಲ . ನಿಪಿ-10 ಎಮ್ ಎಲ್ ಸಿ ಡಿಸ್ಚಾರ್ಜ ಕಾರ್ಡನಲ್ಲಿ ದಿನಾಂಕ ತಿದ್ದುಪಡಿ ಮಾಡಲಾಗಿದೆ ಎಂದರೆ ಸರಿ . ಇಲ್ಲಿ ಟ್ರೇಟ್ ಮೆಂಟ್ ತೆಗೆದುಕೊಳ್ಳುವ ಮೊದಲು ಮಹಾರಾಷ್ಟ್ರದ ಸಂಜಯ ಆಸ್ಪತ್ರೆಯಲ್ಲಿ ಟ್ರೇಟ್ ಮೆಂಟ್ ತೆಗೆದುಕೊಂಡಿದ್ದೆ ಎಂದರೆ ಸಾಕ್ಷಿ ಸುಮ್ಮನೇ ನಿಂತಿರುತ್ತಾರೆ . ಡಿಸ್ಚಾರ್ಜ ಕಾರ್ಡ ಹಾಗೂ ಎಮ್ ಎಲ್ ಸಿಯಲ್ಲಿ ಯಾವ ಡಾಕ್ಟರ ಸಹಿ ಹಾಕಿದ್ದಾರೆ ಗೊತ್ತಿಲ್ಲ, ಆದರೆ ಡಾಕ್ಟರ ಕೊಟ್ಟಿದ್ದು. ನನಗೆ ಚಿಕಿತ್ಸೆ ನೀಡಿದ ವೈದ್ಯರೇ ನಿಪಿ -10 ನ್ನು ಕೊಟ್ಟಿರುತ್ತಾರೆ. ನಿಪಿ-1 ರ ಪ್ರಕಾರ ಅಪಘಾತ ದಿನಾಂಕ 28-08-2021 ರಂದು ಆಗಿರುತ್ತದೆ ಎಂದರೆ ಸಾಕ್ಷಿ ದಿಃ 27-08-2021 ರಂದು ಆಗಿರುತ್ತದೆ ಎಂದು ನುಡಿದಿರುತ್ತಾರೆ. ನಿಪಿ-1 ರ ಪ್ರಕಾರ ನಾವು ಪ್ರಥಮ ವರ್ತಮಾನ ಕೊಟ್ಟಿರುವುದು ದಿಃ 14-09-2021 ಎಂದರೆ ಸರಿ . ಅಪಘಾತವಾದ 18 ದಿನಗಳ ನಂತರ ಕಂಪ್ಲೆಂಟ್ ಕೊಟ್ಟಿದ್ದೇನೆ ಎಂದರೆ ಸರಿ . ಕಚ್ಚಾ ರಸ್ತೆಯ ಪಕ್ಕದಲ್ಲಿ ಚರಂಡಿ ಇದ್ದು ಅದಕ್ಕೆ ಸಿಮೆಂಟ್ ಸ್ಲಾಬ್ ನ ಮುಚ್ಚಿಗೆ ಹಾಕಿದ್ದಾರೆ ಎಂದರೆ ನೋಡಿಲ್ಲ . ನಾನು ಕೊನೆಯದಾಗಿ ಕಾರವಾರ ಆಸ್ಪತ್ರೆಗೆ ಡಿಸೆಬಿಲಿಟಿ ಸರ್ಟಫಿಕೇಟ್ ಪಡೆದುಕೊಳ್ಳಲು ಹೋಗಿದ್ದೆ . ವೈದ್ಯರು ನನ್ನನ್ನು ಅವರ ಚೇಂಬರ್ ನಲ್ಲಿ ಪರೀಕ್ಷೆ ಮಾಡಿ ಡಿಸೆಬಿಲಿಟಿ ಸರ್ಟಫಿಕೇಟ್ ನೀಡಿರುತ್ತಾರೆ . ಡಿಸೆಬಿಲಿಟಿ ಅವಧಿ ದಿಃ 01-06-2026 ರವರೆಗೆ ಇದೆ ಎಂದರೆ ಸರಿ . ಅದು ಟೆಂಪರವರಿ ಡಿಸೆಬಿಲಿಟಿ ಎಂದು ಬರೆದಿದ್ದಾರೆ ಎಂದರೆ ಸರಿ . ನಿಪಿ-32 ಜಾಬ್ ನ ಸಲುವಾಗಿ ಪಡೆದುಕೊಂಡಿದ್ದೋ ಎಂದರೆ ಸಾಕ್ಷಿ ಪರಿಹಾರಕ್ಕೆ ಬೇಕಾಗುತ್ತದೆ ಎಂದು ನಾನು ಕೇಳಿದ್ದೆ, ಆಗ ವೈದ್ಯರು ಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ . ಕಾರವಾರದಲ್ಲಿ ಡಿಸೆಬಿಲಿಟಿ ಇಷ್ಟು

ಮಾಡಲು ಒಂದು ಮೆಡಿಕಲ್ ಬೋರ್ಡ್ ಇದೆ ಎಂದರೆ ಗೊತ್ತಿಲ್ಲ . ಆ ಮೆಡಿಕಲ್ ಬೋರ್ಡನವರು ಡಿಸೆಬಿಲಿಟಿ ಸರ್ಟಿಫಿಕೇಟ್ ಕೊಟ್ಟರೆ ಮಾತ್ರ ಅದು ಅಥೆಂಟಿಕೇಟೆಡ್ ಎಂದರೆ ಸಾಕ್ಷಿ ಸುಮ್ಮನೇ ನಿಂತಿರುತ್ತಾರೆ . ನಿಪಿ-32 ರಲ್ಲಿ ಬರೆದಂತಹ ಯಾವುದೇ ಅಂಗನ್ಯೂನ್ಯತೆ ಇಲ್ಲ ಎಂದರೆ ಸರಿಯಲ್ಲ .

7. ನಾನು ನನ್ನ ಅರ್ಜಿಯಲ್ಲಿ ಹಾಗೂ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿದಂತೆ ಯಾವುದೇ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ . ನಾನು ಕಾರವಾರದ ಮೆಡಿಕಲ್ ಕಾಲೇಜ್ ಆಸ್ಪತ್ರೆಯಲ್ಲಾಗಲೀ, ಕುಮಟಾ ಆಸ್ಪತ್ರೆಯಲ್ಲಾಗಲೀ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ . ಚಿಕಿತ್ಸೆಗಾಗಿ 30 ಸಾವಿರ ರೂಪಾಯಿ ಹಣ ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರರಿಗೆ ಸಂಬಂಧಪಟ್ಟ ಲಾರಿಯಲ್ಲಿ ನಾನು ಕ್ಲಿನರ್ ಆಗಿ ಕೆಲಸ ಮಾಡಿದ್ದು ಇಲ್ಲ ಎಂದರೆ ಸರಿಯಲ್ಲ . ನನಗೆ ಪ್ರತಿ ತಿಂಗಳು 15 ಸಾವಿರ ರೂಪಾಯಿ ಸ್ಯಾಲರಿ ಹಾಗೂ ತಿಂಗಳಿಗೆ 5 ಸಾವಿರ ರೂಪಾಯಿ ಬಾಟಾ ಇರಲಿಲ್ಲ ಎಂದರೆ ಸರಿಯಲ್ಲ . ನಾನು, 1 ನೇ ಎದುರುದಾರರು, ಕುಮಟಾ ಪೋಲಿಸರು ಹಾಗೂ ಕಾರವಾರ ಆಸ್ಪತ್ರೆಯ ವೈದ್ಯರಿಗೆ ಶಾಮೀಲಿಗೆ ತೆಗೆದುಕೊಂಡು ಪರಿಹಾರ ಪಡೆಯುವ ಸಲುವಾಗಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ . ಸುಳ್ಳು ದಾಖಲಾತಿಗಳ ಆಧಾರದಿಂದ ಮೋಸತನದಿಂದ ಪರಿಹಾರ ಪಡೆಯಲು ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ . ನಿಪಿ-27 ರಿಂದ ನಿಪಿ-31 ಎಕ್ಸ್ರೇ ಫೀಲ್ಮಗಳು ನನ್ನ ದುಃಖಾಪತ್ ಗೆ ಸಂಬಂಧಪಟ್ಟವು ಅಲ್ಲ ಎಂದರೆ ಸರಿಯಲ್ಲ . ನಿಪಿ-10 ರಿಂದ ನಿಪಿ-26 ರವರೆಗಿನ ದಾಖಲಾತಿಗಳಂತೆ ನಾನು ಯಾವುದೇ ಚಿಕಿತ್ಸೆ ಪಡೆದಿಲ್ಲ ಹಾಗೂ ಚಿಕಿತ್ಸೆಗೆ ಅದರಲ್ಲಿ ಕಾಣಿಸಿದಷ್ಟು ಹಣವನ್ನು ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ . ನಾನು ಹೇಳಿದಂತೆ ಅಪಘಾತವಾದುದ್ದಾಗಲೀ , ಅಪಘಾತದಲ್ಲಿ ದುಃಖಾಪತ್ ಆಗಿದ್ದಾಗಲೀ, ಆ ದುಃಖಾಪತ್ ಗೆ ಸಂಬಂಧಿಸಿದಂತೆ ನಾನು ಕಾರವಾರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ . ನಾನು ಪರಿಹಾರ ಪಡೆಯುವ ಒಂದೇ ಉದ್ದೇಶದಿಂದ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಿಡಬ್ಲ್ಯೂ: 1

ಮರು ವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.